171

ನಮ್ಮ ವೇದಗಳು

★

ಲೇಖಕರು:

ಶ್ರೀ| ಗುಂಡ್ಮಿ ಮಹಾಬಲ ಭಟ್ಟ,

ವೇದಾಂತ ಶಿರೋಮಣಿ, ವೇದಾಂತ ವಿಶಾರದ,

ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು.

1958.

ಒಂದಾಣೆ ಮಾಲೆ

ನಿವೇದನೆ.

ಸಂಪೂರ್ಣ ವೇದಗಳು ಭಾಷ್ಯ, ಟಿಪ್ಪಣಿ ಮುಂತಾದ್ದರೊಂದಿಗೆ ಸಂಸ್ಕೃತದಲ್ಲಿ ಪ್ರಕಟವಾಗಿವೆ. ಹಾಗೆಯೇ ಹಿಂದೀ, ಗುಜರಾತೀ, ಮರಾಠಿ, ಮುಂತಾದ ಭಾಷಾನುವಾದಗಳೂ ಪ್ರಕಟವಾಗಿವೆ. ಆದರೂ ಕನ್ನಡದಲ್ಲಿ ಹಾಗೆ ಯಾವ ಪುಸ್ತಕಗಳೂ ಹೊರಟಿರಲಿಲ್ಲ. ಈ ಕೊರತೆಯನ್ನು ನಿವಾರಿಸಲು ಮೈಸೂರು ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರು ಅರಮನೆ ಖರ್ಚಿನಿಂದ ಭಾಷ್ಯ, ಟೀಕೆ, ಟಿಪ್ಪಣಿಗಳೊಂದಿಗೆ ಸಂಪೂರ್ಣ ಋಗ್ವೇದವನ್ನು ಕನ್ನಡದಲ್ಲಿ ಈಚೆಗೆ ಪ್ರಕಟಿಸಿರುವುದು ಕನ್ನಡ ನಾಡಿಗೊಂದು ಹೆಮ್ಮೆಯ ವಿಷಯವಾಗಿದೆ. ಮತ್ತು ಈಚೆಗೆ ಹುಬ್ಬಳ್ಳಿಯ ಒಂದು ಸಂಸ್ಥೆಯು ಮೂಲ ವೇದವನ್ನು ಕನ್ನಡಾರ್ಥದೊಂದಿಗೆ ಪ್ರಕಟಿಸಲುದ್ಯಮಿಸಿರುವುದು ಸಂತೋಷದ ಸಂಗತಿಯಾಗಿದೆ.

ಸಾಧಾರಣ ಜನತೆಗೆ ವೇದಗಳ ಪರಿಚಯವಿಲ್ಲದಿರುವುದರಿಂದ ವೇದಗಳ ಮಹಿಮೆಯನ್ನು ತಿಳಿಸುವುದು ಅಗತ್ಯವಾದುದರಿಂದ ಇಂತಹ ಪುಸ್ತಕವನ್ನು ಬರೆಯಬೇಕೆಂದು ಶ್ರೀ ದ್ವಾರಕಾಪೀಠಾಧೀಶ್ವರ ಶ್ರೀಮಜ್ಜಗದ್ಗುರು ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರು ಅಪ್ಪಣೆ ಮಾಡಿದ್ದರಿಂದ ವೇದಗಳ ಪರಿಚಯದ ಈ ಚಿಕ್ಕ ಪುಸ್ತಕವನ್ನು ಬರೆದಿದ್ದೇನೆ.

ಜನಪ್ರಿಯವಾದ 'ಒಂದಾಣೆ ಮಾಲೆ'ಯ ವ್ಯವಸ್ಥಾಪಕರು ಇದನ್ನು ಪ್ರಕಟಿಸಲೊಪ್ಪಿದುದಕ್ಕಾಗಿ ಅಭಿನಂದನೆಗಳು.

ಜನತೆಯು ಇದರ ಸಂಪೂರ್ಣ ಲಾಭ ಪಡೆಯಲೆಂದು ಆಶಿಸುತ್ತೇನೆ.

ಮುಳಬಾಗಿಲು,
ತಾ. 20—1—1958

ಲೇಖಕ,
ಮಹಾಬಲ ಭಟ್ಟ.

ನಮ್ಮ ವೇದಗಳು

ಸ್ವರ್ಗಾಪವರ್ಗದೋ ನೃಣಾಂ ಯೋಽಯಂ ಧರ್ಮಸ್ಸನಾತನಃ ।
ತಸ್ಯ ಮೂಲಮಸೌ ವೇದಃ ಕಾಮಿನಾಂ ಕಲ್ಪಪಾದಪಃ ॥

ಈ ಜಗತ್ತಿನಲ್ಲಿ ಜನ್ಮವೆತ್ತಿದ ಪ್ರತಿಯೊಬ್ಬ ಮಾನವನೂ ತನಗೆ ಯಾವಾಗಲೂ ಸುಖವಾಗಬೇಕೆಂದೂ, ದುಃಖವು ಎಂದೂ ಬರಬಾರದೆಂದೂ ಇಚ್ಛಿಸುತ್ತಿರುತ್ತಾನೆ.

ಸುಖವು ಧರ್ಮದಿಂದಲೂ, ದುಃಖವು ಅಧರ್ಮದಿಂದಲೂ ಬರತಕ್ಕದ್ದಾಗಿರುವುದರಿಂದ ಧರ್ಮ ಮತ್ತು ಅಧರ್ಮದ ಸ್ವರೂಪವನ್ನು ಅರಿತಿರುವುದು ಅಗತ್ಯ. ಇದನ್ನು ಶ್ರುತಿ, ಸ್ಮೃತಿ, ಸದಾಚಾರಗಳು ಬೋಧಿಸುತ್ತವೆ. ಅದರಲ್ಲಿಯೂ ವೇದವು ಇತರಾಪೇಕ್ಷೆಯಿಲ್ಲದೆ ಮುಖ್ಯ ಪ್ರಮಾಣವೆಂದು ಪ್ರಸಿದ್ಧವಾಗಿದೆ. "ಧರ್ಮಂ ಜಿಜ್ಞಾಸಮಾನಾನಾಂ ಪರಮಂ ಶ್ರುತಿಃ" (ಮನು).

ಸ್ಮೃತಿ ಮುಂತಾದವುಗಳು ವೇದವನ್ನಪೇಕ್ಷಿಸಿ ಪ್ರಮಾಣವಾಗುವುವೇ ಹೊರತು, ಸ್ವತಂತ್ರವಾಗಿಲ್ಲವಾದುದರಿಂದ, ಇವು ಪರತಃ ಪ್ರಮಾಣವೆನಿಸಿವೆ. ವೇದವಾದರೋ ಇತರನಿರಪೇಕ್ಷವಾದುದರಿಂದ ಸ್ವತಃ ಪ್ರಮಾಣವೆನಿಸಿದೆ. ರಾಜ್ಯವನ್ನು ಆಳಲು ರಾಜನೊಬ್ಬನ ಅಗತ್ಯವಿರುವಂತೆ; ಯಾಕೆಂದರೆ ಶಾಸಕನಿಲ್ಲದ ರಾಜ್ಯವು ಏಳಿಗೆಹೊಂದಲಾರದು; ಹದಿನಾಲ್ಕು ಲೋಕಗಳಿಗಧಿಪತಿಯಾಗಿರುವ ಈಶ್ವರನು ಪ್ರಪಂಚದ ಶಾಸಕನಾದ ಪ್ರಭುವೆನಿಸಿದ್ದಾನೆ. ಈ ಈಶ್ವರನ ಕಾನೂನಿಗೇ ವೇದವೆಂದು ಹೆಸರು—"ಶ್ರುತಿಸ್ಮೃತೀ ಮಮೈವಾಜ್ಞೇ" ಕಾನೂನಿದ್ದರೆ, ಅದರ ಮೂಲಕವಾಗಿ ಕಾರ್ಯಗಳು ಮುಂದುವರಿಯಬಹುದಷ್ಟೆ! ಈಶ್ವರನ ಎಲ್ಲ ಕಾನೂನೂ ವೇದದಲ್ಲಿದೆ—"ಭೂತಂ ಭವ್ಯಂ ಭವಿಷ್ಯಚ್ಚ ಸರ್ವಂ ವೇದಾತ್ಪ್ರಸಿದ್ಧ್ಯತಿ".

ವೇದವು ಮಂತ್ರ—ಬ್ರಾಹ್ಮಣ ಎಂದೆರಡು ವಿಧವಾಗಿದೆ- ಮಂತ್ರಭಾಗಕ್ಕೆ ಸಂಹಿತೆ ಎಂದು ಹೆಸರು. ಸಂಹಿತೆಯಲ್ಲಿ ಸೂತ್ರರೂಪ

ವಾಗಿ ಹೇಳಲ್ಪಟ್ಟ ವಿಷಯಗಳು ಬ್ರಾಹ್ಮಣದಲ್ಲಿ ವಿಸ್ತಾರವಾಗಿ ವರ್ಣಿತವಾಗಿವೆ.

ವೇದವು ಒಂದೇ ಅರ್ಥವನ್ನು ಪ್ರತಿಪಾದಿಸುತ್ತ ಏಕವಿಧವಾಗಿದ್ದರೂ ಮಂದಮತಿಗಳ ಹಿತಕ್ಕಾಗಿ ವ್ಯಾಸರು ನಾಲ್ಕಾಗಿ ವಿಂಗಡಿಸಿ, ತಮ್ಮ ಶಿಷ್ಯರ ಪೈಕಿ ಪೈಲನಿಗೆ ಋಗ್ವೇದವನ್ನೂ, ವೈಶಂಪಾಯನಿಗೆ ಯಜುರ್ವೇದವನ್ನೂ, ಜೈಮಿನಿಗೆ ಸಾಮವೇದವನ್ನೂ, ಸುಮಂತುವಿಗೆ ಅಥರ್ವವೇದವನ್ನೂ ಉಪದೇಶಿಸಿದರು. ಶಿಷ್ಯಪರಂಪರೆಯಿಂದ ಹೀಗೆ ವೇದಾಧ್ಯಯನವು ಮುಂದುವರಿಯುತ್ತ ಬರಲು, ಗುರುಪರಂಪರಾಕ್ರಮದಿಂದ ಶಾಖಾಪ್ರವರ್ತಕರು ಬೇರೆಬೇರೆಯಾದುದರಿಂದ ಈ ವೇದಗಳಿಗೆ ಅನೇಕ ಶಾಖೆಗಳುಂಟಾದುವು. ಋಗ್ವೇದಕ್ಕೆ ೨೧ ಶಾಖೆಗಳೂ, ಯಜುರ್ವೇದಕ್ಕೆ ೧೦೯ ಶಾಖೆಗಳೂ, ಸಾಮವೇದಕ್ಕೆ ೧೦೦೦ ಶಾಖೆಗಳೂ, ಅಥರ್ವವೇದಕ್ಕೆ ೫೦ ಶಾಖೆಗಳೂ ಇವೆ. ಒಂದೊಂದು ಶಾಖೆಗೂ ಒಂದೊಂದು ಉಪನಿಷತ್ತಿದೆ. ಋಗ್ವೇದದ ೨೧ ಶಾಖೆಗಳಲ್ಲಿ ಈಗ ೨ ಶಾಖೆಗಳು, ಕೃಷ್ಣಯಜುರ್ವೇದದಲ್ಲಿ ತೈತ್ತಿರೀಯ, ಕಠ, ಮೈತ್ರಾಯಣಿ ಎಂಬ ೩ ಶಾಖೆಗಳೂ, ಶುಕ್ಲಯಜುರ್ವೇದದಲ್ಲಿ ಮಾಧ್ಯಂದಿನ ಶಾಖೆ, ಕಾಣ್ವಶಾಖೆಯಲ್ಲಿ ಅರ್ಧವೂ, ಸಾಮವೇದದಲ್ಲಿ ಕೌಥುಮಿ, ಜೈಮಿನೀಯ, ರಾಣಾಯನೀಯ ಶಾಖೆಗಳೂ, ಅಥರ್ವೇದದಲ್ಲಿ ಪೈಪ್ಪಲಾದ ಸಂಹಿತೆ, ಶಾನಕ ಸಂಹಿತೆ ಎಂಬ ೨ ಶಾಖೆಗಳು ಮಾತ್ರ ಈಗ ಉಪಲಬ್ಧವಾಗಿವೆ.

ಋಗ್ವೇದದಲ್ಲಿನ ಅರ್ಧದಷ್ಟು ಋಕ್ಕುಗಳು ಯಜುರ್ವೇದದಲ್ಲಿಯೂ ಇವೆ. ಸಾಮವೇದದಲ್ಲಿ ೭೫ ಋಕ್ಕುಗಳನ್ನು ಬಿಟ್ಟು ಉಳಿದೆಲ್ಲವೂ ಋಗ್ವೇದದಲ್ಲಿದ್ದವೇ ಆಗಿದೆ. ಅಥರ್ವವೇದದಲ್ಲಿ ಐದು ಭಾಗದಷ್ಟು ಋಕ್ಕುಗಳು ಋಗ್ವೇದದ್ದೇ ಇವೆ.

ಪಾದಬದ್ಧವಾದ, ಛಂದೋಬದ್ಧವಾದ ಮಂತ್ರಗಳು ಋಗ್ವೇದವೆಂದೂ, ನಿಯತಾಕ್ಷರವಿಲ್ಲದೆ ಪಾದಬದ್ಧವಾಗಿಲ್ಲದಿರುವ ಮಂತ್ರಗಳು ಯಜುರ್ವೇದವೆಂದೂ, ಗಾನಮಾಡಲ್ಪಟ್ಟ ಮಂತ್ರಗಳು ಸಾಮವೇದವೆಂದೂ, ಛಂದೋಬದ್ಧವಾದ ಋಗ್ವಿಶೇಷಗಳು ಅಥರ್ವವೇದವೆಂದೂ ಪ್ರಸಿದ್ಧವಾಗಿವೆ.

ಯಜ್ಞಯಾಗಾದಿಗಳಲ್ಲಿ ಹೋತೃವಿಗೆ ಋಗ್ವೇದವೂ, ಅಧ್ವರ್ಯುವಿಗೆ ಯಜುರ್ವೇದವೂ, ಉದ್ಗಾತೃವಿಗೆ ಸಾಮವೇದವೂ, ಬ್ರಹ್ಮನಿಗೆ ಅಥರ್ವವೇದವೂ ಉಪಯುಕ್ತವಾಗಿದೆ.

ಋಗ್ವೇದ, ಸಾಮವೇದಗಳು ಪದ್ಯಮಯವಾಗಿಯೂ, ಯಜುರ್ವೇದ, ಅಥರ್ವವೇದಗಳು ಗದ್ಯಪದ್ಯಮಯವಾಗಿಯೂ ಇವೆ. ವೇದಕ್ಕೆ ಆರು ಅಂಗಗಳಿವೆ—ಶಿಕ್ಷಾ, ವ್ಯಾಕರಣ, ಛಂದಸ್, ನಿರುಕ್ತ, ಜ್ಯೋತಿಷ, ಕಲ್ಪ.

ಋಗ್ವೇದ

ಋಗ್ವೇದದಲ್ಲಿ ಮುಖ್ಯವಾಗಿ ೧೦ ವಿಭಾಗಗಳಿವೆ. ಈ ವಿಭಾಗಕ್ಕೆ ಮಂಡಲವೆಂದು ಹೆಸರು. ಪ್ರತಿಯೊಂದು ಮಂಡಲದಲ್ಲಿ ಸೂಕ್ತಗಳ ಸಂಗ್ರಹವಿದೆ. ಎಂಟು ಅಷ್ಟಕವೆಂದೂ ಒಂದು ವಿಭಾಗವಿದೆ. ಹೀಗೆ ಋಗ್ವೇದದಲ್ಲಿ ೧೦ ಮಂಡಲಗಳೂ, ೮ ಅಷ್ಟಕಗಳೂ, ೬೪ ಅಧ್ಯಾಯಗಳೂ, ೮೫ ಅನುವಾಕಗಳೂ, ೧೦೨೮ ಸೂಕ್ತಗಳೂ, ೨೦೨೪ ವರ್ಗಗಳೂ, ೧೦೫೮೯ ಮಂತ್ರಗಳೂ, ೧೫೩೮೨೬ ಶಬ್ದಗಳೂ ಇವೆ.

ಋಗ್ವೇದಕ್ಕೆ ಶಾಕಲ್ಯರು ಪದಪಾಠವನ್ನೂ, ಪಾಂಚಲ ಮತ್ತು ಬಾಭ್ರವ್ಯರು ಕ್ರಮಪಾಠವನ್ನೂ ರಚಿಸಿದ್ದಾರೆ. ಋಗ್ವೇದಕ್ಕೆ ಆಯುರ್ವೇದವು ಉಪವೇದ. ಋಗ್ವೇದಕ್ಕೆ ಐತರೇಯ, ಸಾಂಖಾಯನ ಎಂಬ ೨ ಬ್ರಾಹ್ಮಣಗಳೂ, ಐತರೇಯ, ಕೌಷೀತಕಿ ಎಂಬ ೨ ಅರಣ್ಯಕಗಳೂ ಇವೆ. ಆಶ್ವಲಾಯನ, ಸಾಂಖ್ಯಾಯನ ಎಂಬ ಶ್ರೌತಸೂತ್ರ, ಗೃಹ್ಯಸೂತ್ರಗಳೂ ಇವೆ. ಋಗ್ವೇದದ ಪ್ರತಿಯೊಂದು ಸೂಕ್ತದಲ್ಲಿಯೂ ಯಾವುದಾದರೊಂದು ದೇವತೆಯ ದಿವ್ಯ, ಈಶ್ವರೀಯ ವಿಭೂತಿಯ ಸ್ತುತಿ ಇರುವುದು, ಅದರೊಂದಿಗೇ ಸೃಷ್ಟಿಯ ಅನೇಕ ರಹಸ್ಯ, ತತ್ತ್ವಗಳ ವರ್ಣನೆ ಇದೆ. ಋಗ್ವೇದದಲ್ಲಿನ ಛಂದಸ್ಸುಗಳು ಸಂಸ್ಕೃತದಲ್ಲಿನ ಪ್ರಚಲಿತ ಛಂದಸ್ಸಿಗೆ ಪ್ರಾಯಶಃ ಸರಿಹೊಂದುವುದಿಲ್ಲ. ಪ್ರಚಲಿತವಾದ ಅನುಷ್ಟುಪ್ ಛಂದಸ್ಸು ಇಲ್ಲಿದೆ, ಆದರೆ ಬಹಳವಿಲ್ಲ. ಪಿಂಗಳನ ಛಂದಶ್ಶಾಸ್ತ್ರಾನುಸಾರವಾಗಿ ಛಂದಸ್ಸಿಗೆ ನಾಲ್ಕು ಪಾದಗಳಿರಬೇಕೆಂದಿದ್ದರೂ, ಇಲ್ಲಿ ಮೂರು ಮೂರು ಪಾದಗಳ ಛಂದಸ್ಸೇ ಹೆಚ್ಚಾಗಿರುತ್ತದೆ. ಸುಮಾರು ೫೦ಕ್ಕಿಂತ ಹೆಚ್ಚಾದ ಛಂದಸ್ಸು ಇಲ್ಲಿ ಇದೆ. ಸೂಕ್ತ ದ್ರಷ್ಟೃಗಳ ಹೆಸರು ಮಧುಚ್ಛಂದ, ಮೇಧಾತಿಥಿ, ಶುನಶ್ಶೇಫ, ಕಣ್ವ, ಪರಾಶರ, ಕಶ್ಯಪ, ವಿಶ್ವಾಮಿತ್ರ, ವಾಮದೇವಾದಿ ಮುನ್ನೂರರಷ್ಟು ಇದೆ. ಸೂಕ್ತಗಳಲ್ಲಿ ಹೆಚ್ಚಾಗಿರುವುದು ಸ್ತುತಿ. ಋಗ್ವೇದವನ್ನು ೧೦ ಮಂಡಲವಾಗಿ ವಿಭಾಗಿಸಿರುವುದು ಐತರೇಯಾರಣ್ಯಕ, ಆಶ್ವಲಾಯನ, ಸಾಂಖ್ಯಾಯನ ಗೃಹ್ಯಸೂಕ್ತಗಳಲ್ಲಿ ಕಂಡುಬರುತ್ತದೆ. ಕಾತ್ಯಾ

ಯುನರು ಅಷ್ಟಕ ಮತ್ತು ಅಧ್ಯಾಯುಗಳಲ್ಲಿ ವಿಂಗಡಿಸಿದರು. ಋಗ್ವೇದಾರ್ಥ ವನ್ನು ತಿಳಿಯುಲು ಎರಡು ಪ್ರಾಚೀನ ಗ್ರಂಥಗಳು ಪ್ರಸಿದ್ಧವಿವೆ—ನಿಘಂಟು ಮತ್ತು ಯಾಸ್ಕರನಿರುಕ್ತ. ದೇವರಾಜ ಯಜ್ವಾ ಇವರು ನಿಘಂಟುವಿಗೆ ಟೀಕೆಯುನ್ನೂ, ದುರ್ಗಾಚಾರ್ಯರು ನಿರುಕ್ತಕ್ಕೆ ಟೀಕೆಯನ್ನೂ ಬರೆದರು. ಸಾಯಣಾಚಾರ್ಯರು ಚತುರ್ವೇದಗಳಿಗೂ ಭಾಷ್ಯಕಾರರಾಗಿದ್ದಾರೆ. ಋಕ್ಪ್ರಾತಿ ಶಾಖ್ಯಕ್ಕೆ ಉವ್ವಟರ ಭಾಷ್ಯವಿದೆ.

ಯುಜುರ್ವೇದ

ಯುಜುರ್ವೇದವು ಶುಕ್ಲಯುಜುರ್ವೇದವೆಂದೂ, ಕೃಷ್ಣಯಜುರ್ವೇದ ವೆಂದೂ ಎರಡಿದೆ. ಕೃಷ್ಣಯುಜುರ್ವೇದಕ್ಕೆ ತೈತ್ತಿರೀಯ ಸಂಹಿತೆಯೆಂದೂ, ಶುಕ್ಲಯುಜುರ್ವೇದಕ್ಕೆ ವಾಜಸನೇಯ ಸಂಹಿತೆಯೆಂದೂ ಹೆಸರಿದೆ. ಕೃಷ್ಣ ಯುಜುರ್ವೇದ ಪ್ರಚಾರವು ದಕ್ಷಿಣದ ಆಂಧ್ರ, ದ್ರಾವಿಡ, ಕರ್ಣಾಟಕಗ ಳಲ್ಲಿಯೂ, ಶುಕ್ಲಯುಜುರ್ವೇದದ ಪ್ರಚಾರವು ತದಿತರ ಪ್ರಾಂತ್ಯಗಳಲ್ಲಿಯೂ ಇದೆ. ಯುಜುರ್ವೇದವು ಯಜ್ಞಕ್ಕಾಗಿಯೇ ಇದೆ.

ಯುಜುರ್ವೇದಕ್ಕೆ ಸಾಯಣಾಚಾರ್ಯರ ಭಾಷ್ಯವಲ್ಲದೆ, ಶುಕ್ಲಯುಜು ರ್ವೇದಕ್ಕೆ ಉವ್ವಟರ ಭಾಷ್ಯವಿದೆ; ಪ್ರತಿ ಶಾಖ್ಯಕ್ಕೂ ಇವರ ಭಾಷ್ಯವಿದೆ. ಯುಜುರ್ವೇದಕ್ಕೆ ಧನುರ್ವೇದವು ಉಪವೇದವಾಗಿದೆ. ಯುಜುರ್ವೇದಕ್ಕೆ ತೈತ್ತಿರೀಯ, ಮೈತ್ರಾಯಣೀಯ ಎಂಬ ಎರಡು ಬ್ರಾಹ್ಮಣಗಳಿವೆ. ತೈತ್ತಿ ರೀಯುಕವು ಗೌರವ, ಕಾಂಡಿಕೇಯ ಎಂದು ಎರಡು ವಿಧವಾಗಿದೆ. ಕಾಂಡಿಕೇಯುವು ಆಪಸ್ತಂಬ, ಬೋಧಾಯನ, ಹಿರಣ್ಯಕೇಶೀ, ಸತ್ಯವಾಚೀ, ಔಥೇಯ ಎಂದು ಐದು ವಿಧವಾಗಿದೆ. ಎಂಟು ಶ್ರೌತಸೂತ್ರಗಳೂ, ಗೃಹ್ಯಸೂತ್ರಗಳೂ ಇವೆ. ತೈತ್ತಿರೀಯೋಪನಿಷತ್, ಈಶೋಪನಿಷತ್ ಯುಜುರ್ವೇದದ್ದು.

ಕೃಷ್ಣಯುಜುರ್ವೇದವು ಏಳು ಅಷ್ಟಕವೆಂದೂ, ಏಳು ಕಾಂಡವೆಂದೂ ಹೇಳಲ್ಪಡುತ್ತದೆ. ಪ್ರತಿ ಅಷ್ಟಕದಲ್ಲಿ ೪೪ ಪ್ರಶ್ನೆಗಳು, ೬೫೧ ಅನುವಾಕ ಗಳು, ೨೧೯೮ ಕಾಂಡಿಕ ಅಥವಾ ಮಂತ್ರಗಳು ಇವೆ. ಒಂದು ಕಾಂಡಿಕೆ ಯು ಸಾಮಾನ್ಯವಾಗಿ ೫೦ ಶಬ್ದವುಳ್ಳದ್ದಾಗಿದೆ. ಒಟ್ಟು ಶಬ್ದಸಂಖ್ಯೆ ೧,೧೦,೯೯೬.

ಶುಕ್ಲಯಜುರ್ವೇದದಲ್ಲಿ ಕಾಣ್ವ, ಜಾಬಲ, ಮುಂತಾಗಿ ೧೭ ವಿಭಾಗವಿದೆ. ಇದಕ್ಕೆ ಶತಪಥ ಬ್ರಾಹ್ಮಣವೂ, ಕಾತ್ಯಾಯನ, ವೈಜವಾಪವೆಂಬ ಎರಡು ಶ್ರೌತಸೂತ್ರಗಳು, ಪಾರಸ್ಕರ, ಕಾಪೀಯ ಎಂಬ ಗೃಹ್ಯಸೂಕ್ತಗಳಿವೆ. ಈ ವೇದದಲ್ಲಿ ೪೦ ಅಧ್ಯಾಯಗಳು, ೩೦೩ ಅನುವಾಕಗಳು, ೧೯೭೬ ಕಾಂಡಿಕಗಳು ಇವೆ.

ಸಾಮವೇದ

ಸಾಮವೇದದ ಎಲ್ಲ ಮಂತ್ರಗಳೂ ಗಾನಮಾಡಲ್ಪಡುವಂಥವು. ಈ ವೇದದ ಮೂರು ಸಂಸ್ಕರಣಗಳಲ್ಲಿ ಕೌಥುಮೀಯ ಶಾಖೆಯ ಪ್ರಚಾರವು ಗುಜರಾತಿನಲ್ಲಿಯೂ, ಜೈಮಿನೀಯ ಶಾಖೆಯ ಪ್ರಚಾರವು ಕರ್ಣಾಟಕದಲ್ಲಿಯೂ, ರಾಣಾಯಣೀಯ ಶಾಖೆಯ ಪ್ರಚಾರವು ಮಹಾರಾಷ್ಟ್ರದಲ್ಲಿಯೂ ಇದೆ.

ಉಚ್ಚಾರಣೆಯಲ್ಲಿ ಉದಾತ್ತ, ಅನುದಾತ್ತ, ಸ್ವರಿತ ಸ್ವರಗಳಿಗಾಗಿ ಇತರ ವೇದಗಳಲ್ಲಿ ಚಿಹ್ನೆಗಳಿರುತ್ತವೆ; ಸಾಮವೇದದಲ್ಲಿ ಈ ಚಿಹ್ನೆಗಳಿಗೆ ಬದಲಾಗಿ ಸಮಯ ಮಾತ್ರಾ ನಿರ್ದೇಶಕವಾದ ೧—೨—೩ ಹೀಗೆ ಅಂಕಗಳಿರುತ್ತವೆ. ಸಾಮವೇದದ ವಿಷಯವು ಸ್ತುತಿ ಮತ್ತು ಪ್ರಾರ್ಥನಾಮಾತ್ರವಾಗಿದೆ.

ಸಾಮವೇದಕ್ಕೆ ಸಾಮವಿಧಾನ, ಮಂತ್ರ ಮುಂತಾದ ಬ್ರಾಹ್ಮಣಗಳಿವೆ. ಲಾಟ್ಯಾಯನ, ದ್ರಾಹ್ಯಾಯಣವೆಂಬ ಶ್ರೌತಸೂತ್ರಗಳೂ, ಗೋಭಿಲ ಗೃಹ್ಯಸೂತ್ರ ಮುಂತಾದುವೂ ಇವೆ. ಛಾಂದೋಗ್ಯ, ಕೇನ ಉಪನಿಷತ್ ಈ ವೇದದ್ದು. ಗಾಂಥರ್ವವೇದವು ಉಪವೇದ, ಸಾಮವೇದದಲ್ಲಿ ೨೯ ಅಧ್ಯಾಯಗಳು, ೬ ಆರ್ಚಿಕಗಳು, ೯ ಸಾಮಗಳು, ೧೮೧೩ ಮಂತ್ರಗಳು ಇವೆ.

ಅಥರ್ವವೇದ

ಅಥರ್ವವೇದವು ಪೈಪ್ಪಲಾದ, ಶೌನಕೀಯ, ದಾಮೋದ, ತೌತ್ರಾಯನ, ಜಾಮಲ, ಬ್ರಹ್ಮಪಾಲಾಸ, ಶುನರವಾ, ದೇವದರ್ಶೀ, ಚರಣವಿದ್ಯಾ ಹೀಗೆ ೯ ಭಾಗಗಳುಳ್ಳದ್ದಾಗಿದೆ. ಇದಲ್ಲದೆ ತೈತ್ತಿರೀಯಕ ಹೆಸರಿನ ಔರವ್ಯ, ಕಾಂಡಿಕೇಯ ಎಂಬ ಎರಡು ವಿಭಾಗಗಳಿವೆ. ಶೌನಕ ಶಾಖೆಯ ಸಂಹಿತೆ,

ಪಿಪ್ಪಲಾದ ಶಾಖೆಯ ಸಂಹಿತೆ ಈಗಲೂ ಪ್ರಚಲಿತವಾಗಿದೆ. ಅಥರ್ವವೆಂಬ ಋಷಿಯು ಕಂಡುಹಿಡಿದದ್ದರಿಂದ ಅಥರ್ವವೇದವೆಂಬ ಹೆಸರು ಬಂದಿದೆ.

ಯಜ್ಞದಲ್ಲಿ ಅಧ್ವರ್ಯುವಿಗೆ ಯಜುರ್ವೇದವು ಉಪಯೋಗವಾಗುವುದರಿಂದ ಯಜುರ್ವೇದಕ್ಕೆ ಆಧ್ವರ್ಯವ ಎಂದು ಕರೆಯುವಂತೆ ಬ್ರಹ್ಮನಿಗೆ ಅಥರ್ವವೇದವು ಉಪಯೋಗವಾಗುವುದರಿಂದ ಇದಕ್ಕೆ ಬ್ರಹ್ಮವೆಂಬ ಹೆಸಳು ಬಂದಿದೆ.

ಕೌಶಿಕ, ವೈತಾನ, ಮುಂತಾದ ಕಲ್ಪಸೂತ್ರಗಳೂ, ಮುಂಡಕ, ಮಾಂಡೂಕ್ಯಾದಿ ಉಪನಿಷತ್‌ಗಳೂ, ಗೋಪಥ ಎಂಬ ಬ್ರಾಹ್ಮಣವೂ ಅಥರ್ವಣವೇದದ್ದಾಗಿದೆ. ಇದಕ್ಕೆ ಉಪವೇದವು ಸ್ಥಾಪತ್ಯವೇದ ಅಥವಾ ಅಥರ್ವವೇದ. ಅಥರ್ವವೇದದಲ್ಲಿ ೨೦ ಕಾಂಡಗಳು, ೩೪ ಪ್ರಪಾಠಕಗಳು, ೧೧೧ ಅನುವಾಕಗಳು, ೭೭೩ ವರ್ಗಗಳು, ೭೬೦ ಸೂಕ್ತಗಳು, ೬೦೦೦ ಮಂತ್ರಗಳು, ೧೨೩೮೦ ಶಬ್ದಗಳು, ೭೩೮೨೬ ಅಕ್ಷರಗಳು ಇವೆ.

ಅಥರ್ವವೇದದಲ್ಲಿ ಶಾಂತಿಕ-ಪೌಷ್ಟಿಕಾದಿಕರ್ಮವನ್ನೂ, ಮಾರಣ, ಉಚ್ಚಾಟನ, ಸ್ತಂಭನ, ಮೋಹನ, ಅಭಿಚಾರ ಮುಂತಾದ ಕ್ರಿಯೆಗಳನ್ನೂ, ಆಗ್ನೇಯ, ವಾಯುವ್ಯ ಮುಂತಾದ ಅಸ್ತ್ರಗಳ ಪ್ರಯೋಗಕ್ಕೆ ಬೇಕಾದ ಯಂತ್ರಗಳನ್ನೂ ನಿರೂಪಿಸಲಾಗಿದೆ. ಈಚೆಗೆ ಅಥರ್ವವೇದದ ಪ್ರಚಾರವು ಕಡಿಮೆಯಾಗಲು ಕಾರಣವೇನೆಂದರೆ—ಸತ್ಕಾರ್ಯ ವಿರೋಧಿಗಳಾದ ಜನರನ್ನು ನಿಗ್ರಹಿಸುವುದಕ್ಕೂ ಸದ್ಧರ್ಮಗಳನ್ನು ಪ್ರತಿಷ್ಠಾಪನೆ ಮಾಡುವುದಕ್ಕೂ ವಿನಿಯೋಗಿಸಲುಚಿತವಾದ ಈ ಮಂತ್ರಗಳನ್ನೀಗ ಈ ಪಾಪಮಯ ಕಾಲದಲ್ಲಿ ಜನರು ಸ್ವಾರ್ಥಪರಾಯಣರಾಗಿ ಕೆಟ್ಟಕೆಲಸಗಳಲ್ಲಿ ಉಪಯೋಗಿಸಿಯಾರೆಂದು ಭಾವಿಸಿ, ಬಹು ದೂರದರ್ಶಿಗಳಾದ ಮಹರ್ಷಿಗಳು ಈ ವೇದ ಮಂತ್ರಗಳ ಪ್ರಯೋಗದ ಪ್ರಚಾರವನ್ನು ಕಡಿಮೆಮಾಡಿದ್ದಿರಬಹುದಾಗಿದೆ.

ಭಾಷ್ಯ

ಮೇಲ್ಕಂಡ ನಾಲ್ಕು ವೇದಗಳಿಗೂ ಸಾಯಣ ಮಾಧವಾಚಾರ್ಯರು ಅತಿ ವಿಸ್ತೃತವಾಗಿ ಭಾಷ್ಯ ಬರೆದಿದ್ದಾರೆ. ಸ್ಕಂದಸ್ವಾಮಿ, ಮಹೀಧರ, ಭಟ್ಟ ಭಾಸ್ಕರ ಮುಂತಾದವರೂ ಕೆಲಕೆಲವು ಭಾಗಗಳಿಗೆ ಭಾಷ್ಯ ಬರೆದಿರುವರು.

ಇದನ್ನು ನೋಡಿ ಮುಗ್ಧರಾದ ಪಾಶ್ಚಾತ್ಯ ವಿದ್ವಾಂಸರು ಕೂಡ ತಮ್ಮ ಭಾಷೆಗಳಲ್ಲಿ ಅನುವಾದಮಾಡಿಕೊಂಡರು.

ಕರ್ಮಕಾಂಡ, ಉಪಾಸನಾಕಾಂಡ, ಜ್ಞಾನಕಾಂಡ ಹೀಗೆ ಕಾಂಡ ತ್ರಯಾತ್ಮಕವಾಗಿ ವೇದವು ನಿರೂಪಿಸಲ್ಪಟ್ಟಿದೆ. ಈ ಕರ್ಮಕಾಂಡದ ಸಮನ್ವಯಕ್ಕಾಗಿ ಜೈಮಿನಿಗಳ ಪೂರ್ವ ಮೀಮಾಂಸಾ ಶಾಸ್ತ್ರವೂ, ಉಪಾಸನಾ ಕಾಂಡದ ಸಮನ್ವಯಕ್ಕಾಗಿ ಶಾಂಡಿಲ್ಯದರ್ಶನವೂ, ಜ್ಞಾನಕಾಂಡದ ಸಮನ್ವಯಕ್ಕಾಗಿ ವೇದವ್ಯಾಸರ ಉತ್ತರ ಮೀಮಾಂಸಾಶಾಸ್ತ್ರವೂ ಬಂದಿವೆ. ಹೀಗೆ ಪೂರ್ವ ಮೀಮಾಂಸಾ, ಮಾಧ್ಯ ಮೀಮಾಂಸಾ, ಉತ್ತರ ಮೀಮಾಂಸಾ ಈ ಮೂರು ದರ್ಶನಗಳಿಂದ ಕೂಡಿಯೂ, ಕರ್ಮಪ್ರಧಾನವಾದ ಬ್ರಾಹ್ಮಣ, ಉಪಾಸನಾಪ್ರಧಾನವಾದ ಆರಣ್ಯಕ, ಜ್ಞಾನಪ್ರಧಾನವಾದ ಉಪನಿಷತ್ತುಗಳಿಂದ ಒಡಗೂಡಿಯೂ ಇರುವ ಈ ನಾಲ್ಕೂ ವೇದಗಳು ನಮ್ಮ ಆರ್ಯಸಂತಾನದ ಮಹಾನಿಧಿಗಳಾಗಿವೆ.

ವೇದಾಭ್ಯಾಸ

ಪ್ರತಿಯೊಬ್ಬನ ಏಳಿಗೆಯಾಗಲಿ, ಪತನವಾಗಲಿ ಅವನವನ ಆಚಾರ, ನಡತೆಯನ್ನೇ ಅವಲಂಬಿಸಿದೆ. ಯಾರ ನಡತೆಯು ಉದಾರವಾಗಿಯೂ, ನಿರ್ಮಲವಾಗಿಯೂ ಇರುವುದೋ ಆವನ ಏಳಿಗೆಯು ಅವನ ಕೈಲಿಯೇ ಇದೆ. ಅದಕ್ಕೆ ವಿಪರೀತವಾದ ನಡತೆಯುಳ್ಳವನಿಗೆ ಅಧಃಪತನವು ನಿಶ್ಚಿತವೇ ಇದೆ. ಅಂತಹ ಅಮೂಲ್ಯವಾದ, ಆಚಾರ-ಶೀಲಗಳ ವರ್ಣನೆಯು ಇನ್ನೆಲ್ಲಿಯೂ ಸಿಗದೆ, ವೇದವಾಙ್ಮಯದಲ್ಲಿಯೇ ಇರುವುದು. ಯಾವ ವೇದಗಳ ಅವಲಂಬನೆಯು ನಮ್ಮ ಇಹ-ಪರಗಳ ಅಭ್ಯುದಯಕ್ಕೆ ಸಾಧನವೋ, ಆ ವೇದದ ಅಧ್ಯಯನ-ಅಭ್ಯಾಸವು ಅತ್ಯಗತ್ಯವೆಂದು ಹೇಳಬೇಕಾದ್ದೇ ಇಲ್ಲ.

ವೇದಾಭ್ಯಾಸವು ಮನುಷ್ಯನ ಹೃದಯದಲ್ಲಿ ದೇಶಹಿತವನ್ನೂ, ಜಾತಿಹಿತವನ್ನೂ, ಆತ್ಮಹಿತವನ್ನೂ ಉಂಟುಮಾಡುತ್ತದೆ. ಮನುಷ್ಯನು ಐಹಿಕವಾದ, ಪಾರಲೌಕಿಕವಾದ, ಹಾಗೂ ಪಾರಮಾರ್ಥಿಕವಾದ ಸುಖವನ್ನನುಭವಿಸಬೇಕಾದರೆ ಈ ವೇದಾಭ್ಯಾಸವು ಬೇಕೇಬೇಕು.

ದ್ವಿಜರ ಮುಖ್ಯ ಕರ್ತವ್ಯವೆನಿಸಿದ ಈ ವೇದಾಭ್ಯಾಸದ ಕಡೆ ನಮ್ಮ ಗಮನವು ಕಮ್ಮಿಯಾಗುತ್ತ ಹೋದಂತೆ ಅತ್ತ ವೇದವೆಂದರೇನೆಂಬುದೆಂದೇ

ತಿಳಿಯದಿದ್ದ, ನೋಡದಿದ್ದ ಮಹಾಶಯರೆಲ್ಲ ವೇದಪ್ರಚಾರದಲ್ಲಿ ತೊಡಗಿರುವುದನ್ನು ನಾವಿಂದು ಕಾಣಬಹುದಾಗಿದೆ. ಇದನ್ನಾದರೂ ನೋಡುತ್ತಿರುವ ನಾವೀಗ ಇನ್ನು ಮುಂದಾದರೂ ನಮ್ಮ ಈ ಮುಖ್ಯಕರ್ತವ್ಯಪಾಲನೆಗೆ ತೊಡಗುವುದು ಅಗತ್ಯವಾಗಿದೆ.

"ಸ್ವಾಧ್ಯಾಯೋಽಧ್ಯೇತವ್ಯಃ" ಎಂಬ ವಚನಾನುಸಾರವಾಗಿ ದ್ವಿಜನಾದವನು ಸ್ವಸ್ವಶಾಖೆಯನ್ನು ಖಂಡಿತವಾಗಿ ಕಲಿಯಬೇಕು. ವೇದವು ದ್ವಿಜರ ನಿಧಿಯಾಗಿದೆ. ನಿಧಿಯನ್ನು ಕಾಪಾಡಿ ಇಟ್ಟುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿರುವುದರಿಂದ ನಮ್ಮ ನಿಧಿಯಾದ ವೇದವನ್ನು ನಾವು ಕಾಪಾಡಿಕೊಳ್ಳುವುದು ಸಮುಚಿತವಾಗಿದೆ. ವೇದದ ರಕ್ಷಣೆ ಎಂದರೆ ವೇದವನ್ನೋದಿ, ಅದರಲ್ಲಿ ಹೇಳಿರುವಂತೆ ಆಚರಿಸುವುದೇ ಆಗಿದೆ.

"ಬ್ರಾಹ್ಮಣಸ್ಯ ಚ ದೇಹೋಽಯಂ ಕ್ಷುದ್ರಕಾಮಾಯನೇಷ್ಯತೇ ।
ಇಹಕೃಚ್ಛ್ರಾಯ ತಪಸೇ ಪ್ರೇತ್ಯಾಽನಂತಸುಖಾಯ ಚ ॥"

—ಎಂಬ ತತ್ತ್ವವು ನಮ್ಮಲ್ಲಿ ಈಗೀಗ ಮರೆತುಹೋದಂತಿದೆ. ಯಾವ ಪುಣ್ಯಾತ್ಮರಾದ ದ್ವಿಜವರ್ಯರು ಹಿಂದೆ ಪ್ರಾಣಪಣದಿಂದ ಎದುರಿಸಿ, ವೇದರಕ್ಷಣೆಯಲ್ಲಿ ನಿರತರಾಗಿ ಕೀರ್ತಿಶಾಲಿಗಳಾಗಿದ್ದರೋ, ಅವರ ವಂಶದವರೇ ಆಗಿರುವ ದ್ವಿಜರೀಗ ವೇದರಕ್ಷಣಾಕಾರ್ಯದಲ್ಲಿ ಹಿಂಜರಿಯುತ್ತಿದ್ದಾರೆ. ವೇದವಿಲ್ಲದೆ ದ್ವಿಜರಿಲ್ಲ, ದ್ವಿಜರಿಲ್ಲದೆ ಧರ್ಮವಿಲ್ಲ, ಧರ್ಮವಿಲ್ಲದೆ ಜಗತ್ತಿಲ್ಲ; ಯಾಕೆಂದರೆ "ಧರ್ಮೇ ಸರ್ವಂ ಪ್ರತಿಷ್ಠಿತಂ" ಎಂದಂತೆ ಧರ್ಮವು ಸಕಲಕ್ಕೂ ಆಧಾರವಾಗಿದೆ. ಈ ಧರ್ಮವು ವೇದವಾಙ್ಮಯದಲ್ಲಿಯೇ ವರ್ಣಿತವಾಗಿ ಪ್ರತಿಷ್ಠಿತವಾಗಿದೆ—

ಚಾತುರ್ವರ್ಣ್ಯಂ ತ್ರಯೋ ಲೋಕಾಶ್ಚತ್ವಾರಶ್ಚಾಶ್ರಮಾಃ ಪೃಥಕ್ ।
ಭೂತಂ ಭವ್ಯಂ ಭವಿಷ್ಯಚ್ಚ ಸರ್ವಂ ವೇದಾತ್ಪ್ರಸಿದ್ಧ್ಯತಿ ॥

ಮನು.

ಧರ್ಮತತ್ತ್ವವನ್ನರಿತುಕೊಳ್ಳಲು ವೇದವೇ ಮುಖ್ಯ ಪ್ರಮಾಣ. ಆದುದರಿಂದ ಪ್ರಪಂಚಕ್ಕೆ ಹಿತವೂ, ಅಭ್ಯುದಯವೂ ಆಗಬೇಕಾದರೆ ದ್ವಿಜರು ತಮ್ಮ ನಿಧಿಯಾದ ವೇದವನ್ನು ರಕ್ಷಿಸಿಕೊಳ್ಳಬೇಕು. ವೇದದ ರಕ್ಷಣೆಯಾಯಿತೆಂದರೆ ಇಡೀ ಜಗತ್ತಿನ ರಕ್ಷಣೆಯಾಗುವುದು; ವೇದದ ರಕ್ಷಣೆ

ಯಾಯಿತೆಂದರೆ ಸ್ಮೃತಿ-ಇತಿಹಾಸಗಳ ರಕ್ಷಣೆಯೂ, ಅವುಗಳ ರಕ್ಷಣೆಯಿಂದ ಸದಾಚಾರ ರಕ್ಷಣೆಯೂ ಆಗಿ, ಅದರಿಂದ ರಾಷ್ಟ್ರಕ್ಕೇ ರಾಷ್ಟ್ರವೇ ಸುಖಶಾಂತಿಯನ್ನು ಪಡೆಯುವುದು. ಅದಕ್ಕಾಗಿಯೇ ತೈತ್ತಿರೀಯ ಶ್ರುತಿಯು "ಸ್ವಾಧ್ಯಾಯಾನ್ಮಾಪ್ರಮದಃ" ಎಂದು ಕಟ್ಟುನಿಟ್ಟಾಗಿ ಎಚ್ಚರಿಸಿದೆ. ಇದೇ ಅಭಿಪ್ರಾಯವನ್ನು "ಅನಭ್ಯಾಸೇನ ವಿದ್ಯಾನಾಂ ಆಚಾರಸ್ಯ ಚ ವರ್ಜನಾತ್ । ಆಲಸ್ಯಾದನ್ನದೋಷಾಚ್ಚ ಮೃತ್ಯುರ್ವಿಪ್ರಾನ್ ಜಿಘಾಂಸತಿ ॥" ಎಂಬ ಸ್ಮೃತಿವಚನವೂ ಸಮರ್ಥಿಸುತ್ತದೆ. ಆದ್ದರಿಂದಲೇ ಶಂಕರ ಭಗವತ್ಪಾದಾಚಾರ್ಯರೂ ಕೂಡಾ "ರತ್ನಪಂಚಕ"ವೆಂಬ ಉಪದೇಶಕಪಂಚಕದಲ್ಲಿ, ಮೊಟ್ಟಮೊದಲು "ವೇದೋ ನಿತ್ಯಮಧೀಯತಾಂ" ಎಂದು ಹಿತೋಪದೇಶವಿತ್ತು ಕರುಣಿಸಿದರು.

ಸ್ವರ್ಗಾಪವರ್ಗದೋ ನೃಪಣಾಂ ಯೋಽಯಂ ಧರ್ಮಸ್ಸನಾತನಃ ।
ತಸ್ಯಮೂಲಮಸೌವೇದಃ ಕಾಮಿನಾಂ ಕಲ್ಪವಿಂದಪಃ ।"

—ಎಂದಂತೆ, ವೇದವು ಸನಾತನಧರ್ಮವೆಂಬ ತರುವಿಗೆ ಮೂಲವಾಗಿದೆ. ಬೇರಿಗೆ ನೀರೆರೆದರಲ್ಲವೇ ಹಣ್ಣು ಬಿಡಬಲ್ಲುದು! "ವೇದಾದ್ಧರ್ಮೋಹಿ ನಿರ್ಬಭೌ" ಧರ್ಮವು ವೇದದಿಂದಲೇ ಆವಿರ್ಭವಿಸಿದೆ.

ವೇದ ಶಬ್ದದ ಅರ್ಥ

'ವಿದ-ಜ್ಞಾನೆ' ಎಂಬ ಧಾತುವಿನಿಂದ ವೇದಶಬ್ದವು ನಿಷ್ಪನ್ನವಾಗಿದೆ. 'ಯ ಏವಂ ವೇದ' ಮುಂತಾದ ಸ್ಥಳಗಳಲ್ಲಿ ವೇದಶಬ್ದಕ್ಕೆ ಜ್ಞಾನವೆಂಬರ್ಥವು ರೂಢವಾಗಿದೆ. "ಇಷ್ಟಪ್ರಾಪ್ತ್ಯನಿಷ್ಟಪರಿಹಾರಯೋರುಪಾಯಂ ಯೋಽಗ್ರೇ ವೇದಯತಿ ಸ ವೇದಃ" ಎಂದು ವ್ಯುತ್ಪತ್ತಿ ಮಾಡಬಹುದು. ಮತ್ತು ಸಕಲ ಪುರುಷಾರ್ಥಗಳನ್ನೂ, ಅದರ ಸ್ಥಾನವನ್ನೂ ವೇದದಿಂದ ತಿಳಿಯಬಹುದಾದುದರಿಂದ 'ವಿದಂತಿ' ಎಂಬರ್ಥವಲ್ಲಿಯೂ ವೇದಶಬ್ದವನ್ನುಪಯೋಗಿಸಬಹುದು.

"ಪ್ರತ್ಯಕ್ಷೇಣಾನುಮಿತ್ಯಾ ವಾ ಯಸ್ತೂಪಾಯೋ ನ ಬುಧ್ಯತೆ ।
ಏನಂ ವಿದಂತಿ ವೇದೇನ ತಸ್ಮಾದ್ವೇದಸ್ಯ ವೇದತಾ ॥

—ಎಂಬೀ ಶ್ಲೋಕವು ಮೇಲಿನರ್ಥವನ್ನು ವಿವರಿಸುತ್ತದೆ. ವಿದ್ ಧಾತುವಿಗೆ ಏನೇನು ಅರ್ಥವಿರುವುದೋ ಅದೆಲ್ಲವೂ ವೇದಶಬ್ದಕ್ಕೆ ಅರ್ಥವಾಗುತ್ತದೆ.

'ಸತ್ತಾಯಾಂ ವಿದ್ಯತೆ, ಜ್ಞಾನೇ, ವೇತ್ತಿ, ವಿಂತೆ, ವಿಚಾರಣೆ ॥ ವಿಂದತೇ ವಿಂದತಿ ಪ್ರಾಪ್ತೌ ಶ್ಯನ್ ಲುಕ್‌ಸ್ನಮ್ ಶೇಷ್ವಿದಂ ಕ್ರಮಾತ್ ॥ (ವ್ಯಾಕರಣ ಕಾರಿಕೆ) (೧) ದಿವಾದಿಯ ವಿದ್ ಧಾತುವಿಗೆ ಸ್ಥಿತಿ ಎಂಬ ಅರ್ಥವಿದೆ. ವೇದವು ನಿತ್ಯವಾದುದರಿಂದ ಈ ಅರ್ಥವೂ ಸರಿಯಾಗುತ್ತದೆ; ಅಂದರೆ ವೇದದ ಸ್ಥಿತಿಯು ಅಬಾಧಿತವಾಗಿರುವುದರಿಂದ ವೇದವು ಯಾವಾಗಲೂ ಇರುತ್ತದೆ. (೨) ಇನ್ನು 'ವಿದ್-ಜ್ಞಾನೆ' ಎಂಬ ಜ್ಞಾನವು ವೇದಶಬ್ದಾರ್ಥ ವಾಗುತ್ತದೆ. ಎಲ್ಲ ವಿಚಾರಗಳ ಜ್ಞಾನವೂ ವೇದದಿಂದಲೇ ಆಗುವುದು. ಆದುದರಿಂದಲೇ ಎಲ್ಲ ಶಾಸ್ತ್ರಪುರಾಣಗಳೂ ವೇದದಿಂದಲೇ ಹೊರಟಿವೆ. (೩) 'ವಿದ್-ವಿಚಾರಣೆ.' ವೇದದಲ್ಲಿರುವ ಮೀಮಾಂಸೆಯೇ ವೇದವಿಚಾರ. ದಕ್ಷಸ್ಮೃತಿಯಲ್ಲಿ ವೇದಾಭ್ಯಾಸವು ಐದು ವಿಧವಾಗಿದೆ—ಎಂದಿದೆ. "ವೇದ ಸ್ವೀಕರಣಂ ಪೂರ್ವಂ ವಿಚಾರೋಽಭ್ಯಸನಂ ಜಪಃ । ತದ್ದಾನಂ ಚೈವ ಶಿಷ್ಯೇಭ್ಯಃ ವೇದಾಭ್ಯಾಸೋಹಿ ಪಂಚಧಾ ॥" ಅಂದರೆ ವೇದಾಧ್ಯಯನ, ಅದರ ವಿಚಾರ, ಪುನಃ ಪುನಃ ಪಾರಾಯಣ, ಜಪ, ಶಿಷ್ಯರಿಗೆ ಅಧ್ಯಾಪನ, ಹೀಗೆ ಐದು ವಿಧವಾಗಿದೆ. ಇನ್ನು (೪) 'ವಿದ್ಲೃ-ಲಾಭೆ' ಎಂಬ ಧಾತು ವಿನ ಅರ್ಥವಾದ ಪಡೆಯುವಿಕೆಯೂ ಇದೆ. ಯಾಕೆಂದರೆ ವೇದದಿಂದ ನಾಲ್ಕೂ ಪುರುಷಾರ್ಥಗಳೂ ಸಿಗುತ್ತವೆ. ಅದಲ್ಲದೆ (೫) 'ವಿದ-ಚೇತನಾ ಖ್ಯಾನ ನಿವಾಸೇಷು' ಎಂಬ ಚುರಾದಿಯ ವಿದ್ ಧಾತುವಿನ ಅರ್ಥವೂ ಇದೆ. ಒಟ್ಟಿನ ಮೇಲೆ ವೇದಜ್ಞಾನವು ಅಧ್ಯಾತ್ಮಿಕ ಮಾತ್ರವಲ್ಲ, ಅಧಿದೈವಿಕ, ಅಧಿ ಭೌತಿಕವೂ ಆಗಿದೆ.

ವೇದವು ಅಪೌರುಷೇಯ

ನಕಶ್ಚಿದ್ವೇದ ಕರ್ತಾಚ ವೇದಂ ಸ್ಮೃತ್ವಾ ಚತುರ್ಮುಖಃ ।
ತಥೈವ ಧರ್ಮಾನ್ ಸ್ಮರತಿ, ಮನುಃ ಕಲ್ಪಾಂತರಾಂತರೇ ॥

ಪರಾಶರ.

ಅಂದರೆ ವೇದವನ್ನು ಯಾರೂ ರಚಿಸಿಲ್ಲ. ಚತುರ್ಮುಖ ಬ್ರಹ್ಮನು ಹಿಂದಿನ ಕಲ್ಪದಲ್ಲಿದ್ದುದನ್ನೇ ಸ್ಮರಿಸಿ, ಮುನಿಗಳಿಗೆ ವೇದವನ್ನುಪದೇಶಿಸಿದನು. ಸ್ಮೃತಿಗಳನ್ನು ನಿರ್ಣಯಿಸಿದ ಋಷಿಗಳು ಸ್ಮೃತಿಕರ್ತೃಗಳಾಗಿರುವಂತೆ ವೇದನಿರ್ಣಯಮಾಡಿದವರು ವೇದಕರ್ತೃಗಳಾಗಲಾರರು; ವೇದವ್ಯಾಸರೇ

ಮಂತಾದವರು ವೇದವನ್ನು ವಿಂಗಡಿಸಿದರೇ ಹೊರತು, ಅದನ್ನೇನೂ ಹೊಸ ದಾಗಿ ರಚಿಸಲಿಲ್ಲ. ಚತುರ್ಮುಖ ಬ್ರಹ್ಮನು ಕೂಡ ಈಶ್ವರನಿಂದ ವೇದ ಗಳನ್ನು ಪಡೆದನೇ ಹೊರತು ಸ್ವಯಂಕರ್ತೃವಲ್ಲ. ಈಶ್ವರನು ಕೂಡ ವೇದ ವನ್ನು ಪ್ರಕಟಿಸಿದನೇ ಹೊರತು ಸೃಷ್ಟಿಸಲಿಲ್ಲ. ಈ ಅಭಿಪ್ರಾಯವನ್ನೇ ಮತ್ಸ್ಯಪುರಾಣವು ಸಮರ್ಥಿಸಿದೆ—

"ಅಸ್ಯಸರ್ವಸ್ಯ ಧರ್ಮಜ್ಞಃ ಕಲ್ಪಾದೌ ಪರಮೇಶ್ವರಃ ।
ವ್ಯಂಜಕಃ ಕೇವಲಂ ವಿಪ್ರಾಃ ನೈವಕರ್ತಾ ನ ಸಂಶಯಃ ॥
ಬ್ರಹ್ಮಾಣಂ ಮುನಯಃ ಪೂರ್ವಂ ಸೃಷ್ಟ್ವಾ ತಸ್ಮೈ ಮಹೇಶ್ವರಃ ।
ದತ್ತವಾನಖಿಲಾನ್ ವೇದಾನ್ ವಿಪ್ರಾ ಆತ್ಮನಿ ಸುಸ್ಥಿತಾನ್ ॥

—ಹೀಗೆ ಈಶ್ವರನು ಸ್ವಯಂಲೀಲೆಯಿಂದ ಸಕಲ ವೇದ ಗ್ರಹಣ ಸಮರ್ಥನಾದ ಬ್ರಹ್ಮನನ್ನು ನಿರ್ಮಿಸಿ, ಸ್ವಾತ್ಮನಲ್ಲಿ ಸದಾ ಇರುತ್ತಿರುವ ವೇದ ಗಳನ್ನು ಬ್ರಹ್ಮನಿಗೆ ಕೊಟ್ಟನು. "ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈವೇದಾಂಶ್ಚ ಪ್ರಹಿಣೋತಿ ತಸ್ಮೈ ।"

ಕೆಲವರು ಹೀಗನ್ನುವರು:—ಆರ್ಯಾವರ್ತದಲ್ಲಿ ವಾಸಿಸುತಿದ್ದ ದೊಡ್ಡ ದೊಡ್ಡ ಮಹರ್ಷಿಗಳು ವೇದವನ್ನು ರಚಿಸಿಟ್ಟರು. ■ ಕಾಲದಲ್ಲಿ ಅವರಿಗೆ ಯಾವ ಯಾವ ದೇವತೆಗಳ ನೆನಪಾಯಿತೋ, ಅವರವರನ್ನು ಸ್ತುತಿಸಿದರು; ಯಾವ್ಯಾವ ದೇಶದಲ್ಲಿ ವಾಸಿಸುತಿದ್ದರೋ, ಆಯಾಯ ದೇಶದಲ್ಲಿನ ಪರ್ವತ ಗಳನ್ನೂ, ನದಿಗಳನ್ನೂ ವರ್ಣಿಸಿದರು. ಅಂದರೆ, ನಾಲ್ಕೈದು ಸಾವಿರ ವರ್ಷಕ್ಕಿಂತ ಹಿಂದೆ ವೇದಗಳಿರಲಿಲ್ಲ.

ಅದಕ್ಕುತ್ತರವೇನೆಂದರೆ—ಎರಡು ಸಾವಿರ ವರ್ಷಗಳಿಗಿಂತ ಹಿಂದೆ ವ್ಯಾಕರಣ ಭಾಷ್ಯಕಾರರಿದ್ದರೆಂದು ಮೇಲಿನಂತೆ ವಾದಿಸುವ ಪಾಶ್ಚಾತ್ಯರೇ ಒಪ್ಪಿರುತ್ತಾರೆ. ಅವರಿಗಿಂತ ಬಹಳ ಹಿಂದೆ ಕಾಶಕೃತ್ಸ್ನರಿದ್ದರು ಯಾಕೆಂ ದರೆ ಪಾತಂಜಲಿಗಳು ಅವರನ್ನು ಸ್ಮರಿಸಿದ್ದಾರೆ. ಇದಲ್ಲದೆ ಪಾಣಿನಿಗಳು ಕ್ರಿ. ಪೂ ೭೦೦ ವರ್ಷಕ್ಕಿಂತ ಹಿಂದಿದ್ದವರೆಂದೂ ಪಾಶ್ಚಾತ್ಯರನ್ನುತ್ತಾರೆ. ಈ ಮಹರ್ಷಿಗಳ ಕಾಲದಲ್ಲಿ ವೇದದ ರಚನೆಯಾಗಿದಿದ್ದರೆ ವೇದದ ಕರ್ತೃ ಗಳಿಂಥವರೆಂದು ಇವರು ಯಾಕೆ ತಿಳಿಸದೆ ಇರುತ್ತಿದ್ದರು?

ಪೂರ್ವ ಮೀಮಾಂಸಾಕಾರರಾದ ಜೈಮಿನಿಗಳು 'ಉಕ್ತಂತು ಶಬ್ದ ಪೂರ್ವತ್ವಂ' (೧—೧—೨೯) ಎಂಬ ಸೂತ್ರವನ್ನು ರಚಿಸಿ, ಈಗ ಗುರುಮುಖ

ದಿಂದ ವೇದವನ್ನು ಅಭ್ಯಾಸ ಮಾಡುತ್ತಿದ್ದಂತೆ ಹಿಂದಿನಿಂದಲೂ ಗುರುಪರಂಪರೆಯು ಕ್ರಮದಿಂದಲೇ ವೇದಾಧ್ಯಯನವು ನಡೆದುಬಂದಿದೆ ಎಂದು ಹೇಳಿದ್ದಾರೆ. ಮೀಮಾಂಸಾ ವಾರ್ತಿಕಕಾರರೂ ಇದನ್ನೇ ಹೇಳಿರುವರು.

ವೇದಸ್ಯಾಧ್ಯಯನಂ ಸರ್ವಂ ಗುರ್ವಧ್ಯಯನ ಪೂರ್ವಕಂ ।
ವೇದಾಧ್ಯಯನ ಸಾಮಾನ್ಯಾದಧುನಾಽಧ್ಯಯನಂ ಯಥಾ ॥

ವೇದದ ಪಠನ-ಪಾಠನ ಕ್ರಮವು ಹಿಂದಿನಿಂದಲೂ ಒಂದೇ ರೀತಿಯಿಂದ ನಡೆದುಬಂದಿದೆ. ಚಿಕ್ಕ ಚಿಕ್ಕ ಸ್ತೋತ್ರಗಳಲ್ಲಾದರೂ ಕೂಡ ಕಾಲಕ್ರಮದಿಂದ ಎಷ್ಟೋ ಪಾಠಭೇದಗಳು ಬರುತ್ತವೆ; ಆದರೆ, ವೇದದಲ್ಲಿ ಮಾತ್ರ ಇಂದಿನ ವರೆಗೂ ಪಾಠಭೇದಾದಿಗಳಿಗವಕಾಶವಾಗಲಿಲ್ಲ. ಅಖಿಲ ಭಾರತದ ವೈದಿಕ ಬ್ರಾಹ್ಮಣರನ್ನು ಒಂದೆಡೆ ಸೇರಿಸಿ, ವೇದವನ್ನು ಅವರ ಬಾಯಿಯಿಂದ ಹೇಳಿಸಿದ್ದಾರೆ. ಉಚ್ಚಾರಣೆ, ಕಂಠಸ್ವರದಲ್ಲಿ ಸ್ವಲ್ಪವೂ ವ್ಯತ್ಯಾಸವಾಗಲಾರದು.

ಈಶ್ವರನಂತೆಯೇ ಪರಮಪೂಜ್ಯವಾಗಿರುವ ಈ ವೇದಕ್ಕೆ ಒಬ್ಬ ಕರ್ತೃವಿದ್ದಿದ್ದರೆ ಎಂದಾದರೂ ಮರೆಯುತಿದ್ದೇವೇ? ಮರೆಯಲು ಸಾಧ್ಯವೇ?

ವೇದಕ್ಕೊಂದು ಗೌರವ ಕೊಡುವುದಕ್ಕಾಗಿ ವೈದಿಕರು ವೇದಕರ್ತೃವನ್ನು ಅಡಗಿಸಿಟ್ಟಿದ್ದಾರೆಂದು ಯಾರಾದರೂ ಹೇಳಲು ಸಾಧ್ಯವೇ? ರಾಮಾಯಣ, ಭಾರತ, ಭಾಗವತ, ಭಗವದ್ಗೀತಾದಿ ಗ್ರಂಥಗಳು ಎಷ್ಟೇ ಪೂಜ್ಯವಾಗಿದ್ದರೂ, ಅವು ವ್ಯಾಸಕೃತವೆಂದು ನಾವು ಒಪ್ಪಿಲ್ಲವೇ? ಅಂಥ ಗ್ರಂಥಗಳನ್ನು ನಾವು ಆದರದಿಂದ ಗೌರವಿಸುವುದಿಲ್ಲವೇ? ಹೀಗಿರಲು ವೇದಕ್ಕೆ ನಿಜವಾಗಿ ಒಬ್ಬ ಕರ್ತೃವಿದ್ದರೆ, ನಾವಿದರಂತೆಯೇ ಒಪ್ಪದಿರುತ್ತಿದ್ದೇವೆ?

ಸುಪ್ತಪ್ರತಿಬುದ್ಧ ನ್ಯಾಯದಂತೆ ಸರ್ವಜ್ಞನಾದ ಈಶ್ವರನು ಹಿಂದಿನ ಕಲ್ಪದ ವೇದವನ್ನು ಇನ್ನೊಂದು ಕಲ್ಪದಲ್ಲಿ ಸ್ಮರಿಸಿ, ಉಪದೇಶ ಮಾಡುತ್ತಾನೆಯೇ ಹೊರತು, ವೇದವನ್ನು ಹೊಸದಾಗಿ ನಿರ್ಮಿಸುವುದಿಲ್ಲ.

ಅನಾದಿ ನಿಧನಾ ನಿತ್ಯಾ ವಾಗುತ್ಸೃಷ್ಟಾ ಸ್ವಯಂಭುವಾ ।
ನಿತ್ಯಾವೇದಾಸ್ಸಮಸ್ತಾಶ್ಚ ಶಾಶ್ವತಾ ವಿಷ್ಣು ಬುದ್ಧಿಗಾಃ ।
ಸರ್ಗೆ ಸರ್ಗೇಽಮುನೈವೇತೆ ಉದ್ಗೀರ್ಯಂತೆ ತಥೈವಚ ॥

ಆದುದರಿಂದ ವೇದವು ಪುರುಷಕೃತವಾದುದಲ್ಲ; ಅಪೌರುಷೇಯವಾದುದು.

ಹೀಗೆ ಅಪೌರುಷೇಯವಾದ ವೇದವು ಹಿಂದೂಗಳ ಹಿಂದೂತ್ವಕ್ಕೆ ಆಧಾರವಾಗಿದೆ. ವೇದವನ್ನೊಪ್ಪದಿದ್ದವನು ಎಂದೂ ಹಿಂದೂವೆನಿಸಲಾರನು. ಆದುದರಿಂದಲೇ ದ್ವಿಜರು ಉಪನಯನವಾದೊಡನೆ ವೇದವನ್ನು ಸಾಂಗವಾಗಿಯೂ, ಸರಹಸ್ಯವಾಗಿಯೂ ಕಲಿತು, ಸರ್ವೋತ್ಕೃಷ್ಟರೆನಿಸಿ, ಜೀವಿಸುತ್ತಿದ್ದರು. ವೇದಾಧ್ಯಯನಕ್ಕಾಗಿಯೇ ದ್ವಿಜರಿಗೆ ಉಪನಯನಸಂಸ್ಕಾರವಾಗುತ್ತದೆ.

ಉಪನಯನವಿಲ್ಲದೆ ವೇದಾಧ್ಯಯನವಿಲ್ಲ, ವೇದಾಧ್ಯಯನವಿಲ್ಲದೆ ಜೀವನದಲ್ಲೆಂದೂ ಉತ್ಕರ್ಷವಿಲ್ಲ. ಈ ವೇದದ ರಕ್ಷಣೆಯ ಪ್ರತಿಜ್ಞಾಸೂತ್ರರೂಪವಾಗಿಯೇ ಯಜ್ಞೋಪವೀತ (ಬ್ರಹ್ಮಸೂತ್ರ)ವನ್ನು ದ್ವಿಜರು ಕಂಠದಲ್ಲಿ ಧರಿಸುತ್ತ ಬಂದಿದ್ದರೆನ್ನಬಹುದು. ಈ ವೇದಾಧ್ಯಯನಕ್ಕೂ ಯಜ್ಞೋಪವೀತಕ್ಕೂ ಒಂದು ವಿಧವಾದ ಯೌಕ್ತಿಕಸಂಬಂಧವೂ ಇದೆ—ಯಜ್ಞೋಪವೀತವನ್ನು ಹೀಗೆ ತಯಾರಿಸುತ್ತಾರೆ—ಸಂಹಿತಾಂಗುಲಿ ಚತುಷ್ಟಯ ಪ್ರಮಾಣದಲ್ಲಿ ತೊಂಭತ್ತಾರು (ಷಣ್ಣವತಿ) ಸಲ ಸುತ್ತಿ ಯಜ್ಞೋಪವೀತ ತಯಾರಿಸುತ್ತಾರೆ. ಹೀಗೆ ಲಕ್ಷಸಂಖ್ಯಾತ್ಮಕವಾದ ವೇದದಲ್ಲಿ ಕರ್ಮಕಾಂಡಕ್ಕೆ ೮೦ ಸಾವಿರವೂ, ಉಪಾಸನಾಕಾಂಡಕ್ಕೆ ೧೬ ಸಾವಿರ ಮಂತ್ರಗಳೂ ಇವೆ. ಇವೆರಡೂ ಒಟ್ಟು ಸೇರಿ ೯೦ ಸಾವಿರವೇ ಆಗುತ್ತದೆ. ಇದರ ತೊಂಭತ್ತಾರು ಸಂಖ್ಯೆಗಳೂ, ಯಜ್ಞೋಪವೀತವನ್ನು ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥಾಶ್ರಮರು ಮಾತ್ರ ಧರಿಸುತ್ತಾರೆ. ಕರ್ಮಕಾಂಡ, ಉಪಾಸನಾಕಾಂಡಗಳ ೯೬ ಸಾವಿರ ಮಂತ್ರಗಳನ್ನು ಈ ಮೂರು ಆಶ್ರಮಿಗಳೇ ಓದುತ್ತಾರೆ. ಈ ವೇದಮಂತ್ರಗಳಿಗೆ ತಾವು ಅಧಿಕಾರಿಗಳೆಂದು ಸೂಚಿಸುವುದಕ್ಕಾಗಿಯೇ ಈ ಮೂರು ಆಶ್ರಮಿಗಳೂ ಉಪವೀತವನ್ನು ಧರಿಸುತ್ತಾರೆ ಎಂಬಭಿಪ್ರಾಯ ತೋರುತ್ತದೆ, ಮತ್ತು ವೇದರಕ್ಷಣೆಯ ಈ ಪ್ರತಿಜ್ಞೆಯನ್ನು ಮರೆಯಬಾರದೆಂಬುದಕ್ಕಾಗಿ ಉಪವೀತದ ತುದಿಗೆ ಗಂಟನ್ನು ಹಾಕಿಕೊಂಡಿರಲಾಗುತ್ತದೆ.

ಸನ್ಯಾಸಿಗಳು ಕರ್ಮಕಾಂಡ, ಉಪಾಸನಾಕಾಂಡಗಳ ಮಂತ್ರಗಳಿಗೆ ಅಧಿಕಾರಿಯಲ್ಲದಿರುವುದರಿಂದ ಸನ್ಯಾಸಸ್ವೀಕಾರದ ಕಾಲದಲ್ಲಿ ಈ ವೇದರಕ್ಷಣೆಯ ಪ್ರತಿಜ್ಞಾಸೂತ್ರವೆನಿಸಿದ ಯಜ್ಞೋಪವೀತವನ್ನು ಕಡಿದುಹಾಕಿ, ಬಾಕಿ ಉಳಿದ ಚತುಸ್ಸಹಸ್ರ ಮಂತ್ರಾತ್ಮಕವಾದ ಜ್ಞಾನಕಾಂಡದ ಮಂತ್ರಗಳನ್ನು ಓದುವರು. ಇದು ಅದರ ರಹಸ್ಯವಾಗಿದೆ.

ಹೀಗೆ ಅಪಾರಮಹಿಮಾನ್ವಿತವೂ, ಪವಿತ್ರವೂ, ಹಿಂದೂ ಧರ್ಮಾಧಾರ ಸ್ತಂಭವೂ ಆದ ವೇದವನ್ನು ಪ್ರತಿಯೊಬ್ಬ ದ್ವಿಜನೂ ಓದಿ, ಅದರಲ್ಲಿ ಹೇಳಿರುವಂತೆ ಧರ್ಮವನ್ನು ಆಚರಿಸಿ, ಕೃತಾರ್ಥನಾಗಬೇಕು.

"ವೇದ ಏವ ದ್ವಿಜಾತೀನಾಂ ನಿಶ್ರ್ಯೇಯಸಕರಃ ಪರಃ ।"

(ಯಾಜ್ಞ)

ಸರ್ವ ವೈದಿಕ ಶಾಖಾ ಸಮ್ಮೇಳನ

ವೇದಗಳ ಅವನತಿ ಸ್ಥಿತಿ ಮತ್ತು ವೇದಗಳ ಪ್ರಚಾರ, ಈ ವಿಷಯದ ವಿಮರ್ಶೆಗಾಗಿ ಹೇವಿಳಂಬಿ ಸಂ।ರದ ಕಾರ್ತಿಕ ಶು।೧೦ರಿಂದ ೧೫ರ ವರೆಗೆ ಕಾನಪುರದಲ್ಲಿ ಗಂಗಾನದೀತಟದಲ್ಲಿ ಸರ್ವ ವೈದಿಕ ಶಾಖಾ ಸಮ್ಮೇಳನವು ಶ್ರೀ ದ್ವಾರಕಾಪೀಠಾಧೀಶ್ವರ ಶ್ರೀಮಜ್ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಅಭಿನವ ಸಚ್ಚಿದಾನಂದತೀರ್ಥಸ್ವಾಮಿಗಳವರ ಹಾಗೂ ಜ್ಯೋತಿಷ್ಪೀಠಾಧೀಶ್ವರ ಶ್ರೀಮಜ್ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಕೃಷ್ಣಬೋಧಾಶ್ರಮ ಸ್ವಾಮಿಗಳವರ ಸಮಕ್ಷಮದಲ್ಲಿ ಶ್ರೀ ಶಂಕರಾಚಾರ್ಯ ಸ್ವಾಮಿಗಳವರ ಪ್ರಯತ್ನದಿಂದ ಜರುಗಿತು. ದೇಶದ ನಾನಾ ಭಾಗಗಳಿಂದ ವೇದ ಮತ್ತು ಶಾಸ್ತ್ರದ ವಿದ್ವಾಂಸರಲ್ಲದೆ ವಿದೇಶೀಯ ಪ್ರತಿನಿಧಿಗಳೂ ಬಂದಿದ್ದರು. ವೇದ ಸಂಬಂಧವಾದ ನೂರಾರು ೯೬ ವಿಷಯಗಳ ಮೇಲೆ ವಿದ್ವಾಂಸರ ತರ್ಕಬದ್ಧವಾದ ಶಾಸ್ತ್ರಾರ್ಥವು ನಡೆದು ಕೆಳಗಿನ ನಿರ್ಣಯಗಳಾದವು.

೧. ವೇದವು ಅಪೌರುಷೇಯ ಮತ್ತು ನಿತ್ಯವಾದುದು, ಹಾಗೂ ಸ್ವತಃಪ್ರಮಾಣವಿದೆ.

೨. ಉಪನೀತ ತ್ರೈವರ್ಣಿಕರೇ ವೇದಾಧಿಕಾರಿಗಳು. ಬ್ರಾಹ್ಮಣವೂ ವೇದವೇ ಇದೆ.

೩. ವೇದಶಾಖಾಂತರ್ಗತವಾದ ಬ್ರಾಹ್ಮಣ ಮುಂತಾದ್ದರ ಉಚ್ಛೇದವಾಗಲಾರದು. ಯಾಕೆಂದರೆ ವೇದವು ನಿತ್ಯ. ಮತ್ತು ಅಧ್ಯಯನ ಪರಂಪರೆಯು ಲೋಪವಾಗುವುದಿಲ್ಲ.

೪. ವೇದಾಂಗಗಳ ಉಪಯೋಗವೇನೆಂದರೆ—ವೇದಗಳ ಸಂರಕ್ಷಣೆ. ವೇದದಲ್ಲಿರುವ ಇತಿಹಾಸಗಳು, ಪುರುಷ, ಪಶು, ನಗರಾದಿ ಬೋಧಕ ಶಬ

ಗಳು (ವೇದವು ನಿತ್ಯವಾಗಿರುವುದರಿಂದ) ಘಟನಾನುಸಾರವಾಗಿ ನಿವಿಷ್ಟವಾದವುಗಳಲ್ಲ, ಇನ್ನೇನೆಂದರೆ ಶಬ್ದಾನುಸಾರವಾಗಿ ಘಟನೆಯಾಗುತ್ತವೆ.

೫. ಅಸ್ಪೃಶ್ಯತೆಯು ವೇದ ಶಾಸ್ತ್ರ ಪ್ರತಿಪಾದಿತವಾಗಿರುವುದರಿಂದ ಅದರ ನಿವಾರಣೆಯು ಅಶಾಸ್ತ್ರೀಯ.

೬. ಲಗ್ನ ವಿಚ್ಛೇದವಾಗಲಾರದು.

೭. ಋಷಿ, ಛಂದ, ದೇವ, ಸ್ವರ, ವಿನಿಯೋಗಗಳು ವೇದರಕ್ಷಣೆಯಲ್ಲಿ ಉಪಯೋಗವಾಗುತ್ತದೆ. ಮೂರ್ತಿಪೂಜೆ ಮತ್ತು ಅವತಾರವು ವೈದಿಕವಾದುದು.

೮. ವೇದದೊಂದಿಗೆ ಭಾರತ ಸಂಸ್ಕೃತಿಯ ಸಂಬಂಧವು ಘನಿಷ್ಠವಾಗಿದೆ. ಸಂಸ್ಕೃತಿಯು ವೇದಪ್ರತಿಪಾದಿತವಾದುದು. ಸಭ್ಯತೆಯು ಸಂಸ್ಕೃತಿಜನ್ಯವಾದುದು.

೯. ಬೌದ್ಧರ ಶೂನ್ಯವಾದ ಹಾಗೂ ವಿಜ್ಞಾನವಾದವು ವೈದಿಕ ಸಿದ್ಧಾಂತದಿಂದ ಸರ್ವಥಾ ಬೇರೆಯಾದುದು.

೧೦. ಮನುಷ್ಯ ಮತ್ತು ಮನುಷ್ಯಭಿನ್ನ ಪ್ರಾಣಿಗಳ ಸಮವ್ಯಾಪ್ತತ್ವವು ಶಾಸ್ತ್ರೀಯ ದೃಷ್ಟಿಯಿಂದಲ್ಲ.

೧೧. ಶ್ರುತಿಸ್ಮೃತಿಗನುಸಾರವಾಗಿ ವರ್ಣಾಶ್ರಮ ವ್ಯವಸ್ಥೆಯನ್ನು ಸ್ವೀಕರಿಸಬೇಕು.

೧೨. ಭೌತಿಕವಾದಾನುಸಾರಿಯಾದ ಅರ್ಥವ್ಯವಸ್ಥೆಯು ವೇದಾನುಕೂಲವಲ್ಲ.

೧೩. ಶ್ರಾದ್ಧ ಮುಂತಾದ್ದು ಶಾಸ್ತ್ರೀಯ.

Edited, Printed & Published by K. V. Shenoy
at the Prabhat Printers, Ltd., Mangalore.